

## ಗುಂಡು

ಭೀಮ: ನಿನ್ನನ್ನು ಗುಂಡ ಎಂದು ಏಕೆ ಕರೆಯುತ್ತಾರೆ? ತೆಳ್ಳಗೆ ಉದ್ದಕ್ಕೆ ಇದ್ದೀಯಾ?
ಗುಂಡ: ಪರೀಕ್ಷೆಯಲ್ಲಿ ಗುಂಡುಗಳೇ ಜಾಸ್ತಿ ಬರ್ತಿದ್ದು. ಅದ್ಕೆ ಹಾಗೆ ಕರೀತಾರೆ.

## ಹಳ್ಳ

ರಾಮ: ಯಾಕೋ ನನ್ನ ಮದುವೆಗೆ ಬರಲಿಲ್ಲ?
ಸೋಮ: ನೀನು ಹಳ್ಳಕ್ಕೆ ಬೀಳೋದನ್ನ ನೋಡಕ್ಕೆ ಇಷ್ಟಪಡಲಿಲ್ಲ!
ರಾಮ: ಸಾಕ್ ಸುಮ್ನೆ ಇರೋ. ಸತ್ಯ ಹೇಳೋ?
ಸೋಮ: ಸತ್ಯನಾ. ಹಳೆ ಡವ್ ಮದ್ವೆ ಆಗೋದನ್ನ ನೋಡೋಕೆ ಕಷ್ಟ ಆಯ್ತು ಸೋ. ಬರಲಿಲ್ಲ.

## ಕಾಲ ಸರಿಹೋಗುತ್ತೆ

ಪತ್ನಿ: ರೀ, ಸೀರೆ ಕೊಂಡುಕೊಳ್ಳಲು ಅಂಗಡಿಗೆ ಬರ್ತೀರಾ?
ಪತಿ: ನಾವು ಸಿನಿಮಾಕ್ಕೆ ಹೋಗೋಣ ಅಂದುಕೊಂಡಿದ್ದೆ ಅಲ್ವೆ.
ಪತ್ನಿ: ಅಂಗಡಿಯ ಹತ್ತಿರ ನನ್ನ ಇಳಿಸಿ. ಸಿನಿಮಾಕ್ಕೆ ಹೋಗಿ ಬನ್ನಿ. ಅಷ್ಟೊತ್ತಿಗೆ ಸೀರೆ ಸೆಲೆಕ್ಟ್ ಮಾಡ್ತೀನಿ.

ಪತ್ರಕರ್ತ: ನಿಮ್ಮ ಚಿತ್ರದ ಬಿಡುಗಡೆ ಬಗ್ಗೆ ಏನು ಹೇಳ್ತೀರಾ?
ನಿರ್ದೇಶಕ: ಕೆಲವರಿಗೆ ಇಷ್ಟವಾಗಿದೆ... ಕೆಲವರಿಗೆ ಇಲ್ಲ.
ಪತ್ರಕರ್ತ: ನಿಮ್ಮ ಮಾತಿನ ಅರ್ಥ?
ನಿರ್ದೇಶಕ: ನಮಗೆ ಇಷ್ಟವಾಗಿದೆ.... ಪ್ರೇಕ್ಷಕರಿಗೆ ಇಲ್ಲ.

ಕಮಲಿ: ರೀ ಒಂದು ಸೋಪು ಕೊಡಿ.
ಕಿಟ್ಟು: ಮೇಡಂ, ಈ ಸೋಪು ತಗೊಳ್ಳಿ. ಬಟ್ಟೆ ಬೆಳ್ಳಗಾಗುತ್ತೆ.
ಕಮಲಿ: ಹೌದಾ, ಹಾಗಾದ್ರೆ ನಮ್ಮವರ ಕಪ್ಪು ಕೋಟು ಬೆಳ್ಳಗಾದ್ರೆ ಕೋರ್ಟಿಗೆ ಹೋಗುವುದು ಹೇಗೆ?

ಕ್ಲಾಸ್‌ನಲ್ಲಿ ಗಲಾಟೆ ಮಾಡುತ್ತಿದ್ದ ಸಂತಾನನ್ನು ಗಮನಿಸಿದ ಟೀಚರ್ ಪ್ರಶ್ನೆ ಕೇಳಿದರು.
ಟೀಚರ್: ಅಷ್ಟೋತ್ತರ ಎಂದರೇನು?
ಸಂತಾ: ಎಷ್ಟು ಪ್ರಶ್ನೆ ಕೇಳಿದ್ದಾರೆ, ಅಷ್ಟೇ ಪ್ರಶ್ನೆಗೆ ಉತ್ತರ ಬರೆಯುವುದು...
ಟೀಚರ್ (ಸಿಟ್ಟಿನಿಂದ): ಮರಣೋತ್ತರ ಎಂದರೇನು?
ಗುಂಡಾ: ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾ ಪ್ರಾಣ ಬಿಡೋದು...

ಹುಡುಗಿ:
ಈ ಡ್ರೆಸ್ ಬೆಲೆ ಎಷ್ಟು?
ಅಂಗಡಿಯಾತ: ಕೇವಲ ಐದು ಕಿಸ್ ಮಾತ್ರ.
ಹುಡುಗಿ: ಚೂಡಿದಾರಕ್ಕಾದ್ರೆ..?
ಅಂಗಡಿಯಾತ: ಹತ್ತು ಕಿಸ್.
ಹುಡುಗಿ: ಎರಡನ್ನೂ ಪ್ಯಾಕ್ ಮಾಡಿ. ಬಿಲ್ ನನ್ನ ಅಜ್ಜಿ ಕೊಡ್ತಾರೆ..!

## ಹೆಚ್ಚಾದ ಮಧು

ಶಾಸ್ತ್ರಿ: ನೀವಿಬ್ಬರೂ ಬಹಳ ಹಿಂದೆ ಮಧುಚಂದ್ರದ ಬಹು ಸಿಹಿಯನ್ನು ಸವಿದಿರಬೇಕಲ್ಲವೇ?
ಗುರು: ಹೌದಪ್ಪ, ಈಗ ಅದರಿಂದಲೇ ಮಧುಮೇಹಿಗಳಾಗಿದ್ದೇವೆ.

(ಸಂಗ್ರಹ)

ಪ್ರೊ. ಎಸ್.ಆರ್.ದೇವಪ್ರಕಾಶ್, ತುಮಕೂರು


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೆಕಾ ಟೀ ಒಂದು ಉತ್ತಮ ಆಯ್ಕೆ



ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ



WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket | Flipkart
www.arecatea.in ನಲ್ಲೂ ಲಭ್ಯ